# ‘ಕರ್ನಾಟಕ ಸಂಸ್ಕೃತಿಯ ಬೇರುಗಳು ಮೌಖಿಕ ಆಕರಗಳಲ್ಲಿವೆ

ಡಾ. ವೀರಣ್ಣ ದಂಡೆ (1951) ಕರ್ನಾಟಕದ ಪ್ರಮುಖ ಜಾನಪದ ವಿದ್ವಾಂಸರು. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಜಾನಪದ, ವಚನ ಸಾಹಿತ್ಯ ಮತ್ತು ಶರಣ ಸ್ಮಾರಕಗಳು ಇವರ ಅಧ್ಯಯನದ ಕ್ಷೇತ್ರಗಳು. ಕನ್ನಡ ಜಾನಪದ ಸಿದ್ಧಾಂತಗಳನ್ನು ರೂಪಿಸುವಲ್ಲಿ, ಜನಪದ ಕಾವ್ಯಮೀಮಾಂಸೆಯನ್ನು ಕಟ್ಟುವಲ್ಲಿ ಮಹತ್ತ್ವದ ಸಂಶೋಧನೆ ಕೈಗೊಂಡರು. ಸ್ಥಳೀಯ ಆಕರ, ಮೌಖಿಕ ಆಕರಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸಿ ಹೊಸ ಅಧ್ಯಯನ ಕ್ರಮಗಳನ್ನು ರೂಪಿಸಿದರು. ‘ಜನಪದಕಥೆ ವಸ್ತು ಮತ್ತು ತಂತ್ರ’, ‘ಕನ್ನಡ ಜಾನಪದ ಪ್ರಜ್ಞೆ’, ‘ದೇಸೀ ದೃಷ್ಟಿ’, ‘ಮೌಖಿಕ’, ‘ಜನಪದ ಕಾವ್ಯಮೀಮಾಂಸೆ’, ‘ಜನಪದ ಸಾಹಿತ್ಯ ಸಿದ್ಧಾಂತಗಳು’, ‘ಜನಪದ ಕಾವ್ಯ ಪ್ರಥಮ ವಿಮರ್ಶೆ’, ‘ವಚನ ಕಾವ್ಯಮೀಮಾಂಸೆ’, ‘ಕನ್ನಡ ಕಾವ್ಯಮೀಮಾಂಸೆ’, ‘12ನೇ ಶತಮಾನದ ಶರಣ ಸ್ಮಾರಕಗಳು’ (ಮೂರು ಸಂಪುಟಗಳು) ಸೇರಿದಂತೆ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಹತ್ತು ವರ್ಷಗಳ ಕಾಲ ತಮ್ಮ ಪತ್ನಿ ಡಾ. ಜಯಶ್ರೀ ದಂಡೆ ಅವರೊಂದಿಗೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಸುತ್ತಾಡಿ ಶರಣ ಸ್ಮಾರಕಗಳ ಕುರಿತು ಅಧ್ಯಯನ ಮಾಡಿದ್ದಾರೆ. ಜಾನಪದ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಸಾಹಿತ್ಯ ಕ್ಷೇತ್ರದ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ವೀರಣ್ಣ ದಂಡೆ ಅವರು ಪ್ರಸ್ತುತ ಡಾ. ಬಿ.ಡಿ. ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರಾಗಿದ್ದಾರೆ.

◆ **ನೀವು ಬಸವಕಲ್ಯಾಣ ಮತ್ತು ಆಳಂದದ ಗಡಿಯಲ್ಲಿರುವ ಸಲಗರದವರು. ನಿಮ್ಮ ಸುತ್ತ ಸಮೃದ್ಧ ಜಾನಪದ ತಿಳಿವಳಿಕೆಯಿರುವ ಹಳ್ಳಿಗಳಿದ್ದವು. ಕೋಹಿನೂರು, ಹಾರಕೂಡ, ದೇಗಾಂವ, ಸಿರಗಾಪೂರ, ತೊರಿವಾಡಿ ಈ ಆಳಂದಿನ ನರೋಣದವರೆಗೆ. ಈ ಪ್ರದೇಶ ನಿಮ್ಮ ಜಾನಪದ ತಿಳಿವಳಿಕೆಯನ್ನು ಹೇಗೆ ಪೋಷಿಸಿತು?**

ಖರೇ ಅದ. ಈಗ ನಮ್ಮೂರಿನ ವಾತಾವರಣ ಬಹಳ ಮುಖ್ಯವಾಗಿ ಗಮನಿಸಬೇಕು. ಆವಾಗ ಕಲಾವಿದರ ಸಂಖ್ಯೆ ಹಳ್ಳಿಹಳ್ಳಿಗೂ ಜಾಸ್ತಿನೆ ಇತ್ತು. ಪ್ರತಿ ಊರು ಊರಿಗೂ ಜನಪದ ಕಲಾವಿದರು ಇದ್ರು. ನಮ್ಮೂರಾಗಂತು ಸುಮಾರು ನೂರು ಜನ ಕಲಾವಿದರು ಇದ್ರು. ಗಲ್ಲಿ ಗಲ್ಲಿಗೂ ಹಾಡೋರು, ಬಾರಿಸೋರು, ಬಡ್ಯೋರು, ಕುಣಿಯೋರು ಅದ್ಭುತವಾದಂಥ ಕಲಾವಿದರಿದ್ರು. ಪ್ರತಿ ಅಮಾವಾಸ್ಯೆ